INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -2, July-August, 2022,
PageNo,34-40
Peer Reviewed Journal, Referred Journal

# ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಆಳಿದ ರಾಜವಂಶಸ್ಥರ ಶಾಸನಗಳ ಒಂದು ಸ್ಥೂಲನೋಟ

**ಶಿವರಾಜು.**[1]

ಒಂದು ಸ್ಥಳ, ಪ್ರದೇಶ, ದೇಶದ ಹಾಗೂ ಆ ನಾಡಿನ ಪರಿಪೂರ್ಣವಾದ ಇತಿಹಾಸವನ್ನು ರಚಿಸುವಲ್ಲಿ ಮತ್ತು ತಿಳಿದುಕೊಳ್ಳುವಲ್ಲಿ ಹಲವು ಹತ್ತು ಅಲ್ಲಿನ ಪ್ರಾಂತೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯ ಘನೀಭೂತ ಅಂಶಗಳು ಅಂತರ್ಗತವಾಗಿರುತ್ತವೆ. ಆದಕಾರಣ ಯಾವುದೇ ಒಂದು ಪ್ರದೇಶದ ಇತಿಹಾಸವನ್ನು ತಿಳಿಯಲು ಇರುವ ಪ್ರಾಚೀನ ಪುರಾತತ್ವಶಾಸ್ತ್ರದ ಆಕರಗಳು ಬಹುಮುಖ್ಯವಾಗಿಯೇ ಇರುತ್ತವೆ. ಅವುಗಳಲ್ಲಿ ಶಿಲಾ ಶಾಸನಗಳು, ದೇವಾಲಯಗಳು, ಕೆರೆಕಟ್ಟೆಗಳು, ನಾಣ್ಯಗಳು, ಶಿಲ್ಪಗಳು ಇವುಗಳಲ್ಲಿನ ವಾಸ್ತುಶಿಲ್ಪಗಳು ಹೆಚ್ಚಿನ ಮಹತ್ವದ ಸ್ಥಾನವನ್ನು ಕೂಡ ಪಡೆದುಕೊಂಡಿರುತ್ತೇವೆ. ಆದರೆ ಮುಂದೆ ಇತಿಹಾಸ ಪುನರ್ ರಚನೆಗೆ ಅನುಕೂಲವಾಗಲೆಂಬ ಮಹಾನ್ ಉದ್ದೇಶದಿಂದಲೇ ಅವುಗಳು ರಚಿತವಾಗಿದ್ದವು. ಆದರೆ, ಸಮಕಾಲೀನ ವಿದ್ಯಮಾನಗಳನ್ನು ಅಥವಾ ಅಲ್ಲಿನ ವ್ಯವಹಾರಗಳನ್ನು ದಾಖಲು ಮಾಡಲೆಂದೇ ಅವುಗಳು ರಚಿತವಾಗಿವೆ ಎಂಬುದು ತಿಳಿಯಬರುತ್ತದೆ.[1] ಈ ನೆಲೆ ಮತ್ತು ಹಿನ್ನೆಲೆಯಿಂದ ಪ್ರಸ್ತುತ ಲೇಖನದಲ್ಲಿ ಪಿರಿಯಾಪಟ್ಟಣ ಪ್ರದೇಶವನ್ನು ಕಾಲಾನುಕ್ರಮದಲ್ಲಿ ಈ ಭಾಗವನ್ನು ಒಡೆಯರ ಇತಿಹಾಸವನ್ನು ಸ್ಥೂಲವಾಗಿಯೇ ದಾಖಲಿಸಲಾಗಿದೆ. ಪಿರಿಯಾಪಟ್ಟಣ ತಾಲ್ಲೂಕಿನ ಇತಿಹಾಸದಲ್ಲಿ ಅಂತರ್ಗತವಾಗಿದೆ ಎಂಬುದು ಸರ್ವವಿಧಿತ ವಿಚಾರವಾಗಿದೆ. ಅದನ್ನು ಈ ಮುಂದಿನಂತೆಯೇ ಸಾದರಪಡಿಸಲಾಗಿದೆ.

ಯಾವುದೇ ಶಿಲಾ ಶಾಸನಗಳು ಈ ನಾಡಿನ ಸಂಪತ್ತು, ತೇದಿಯ ಹಾಗೂ ಅತೇದಿಯ ಸಹಸ್ರಾರು ಶಾಸನಗಳು ಪ್ರತಿಯೊಂದು ಅಧ್ಯಯನಕ್ಕೂ ಕೂಡ ಉಪಯುಕ್ತವಾಗಿವೆ. ಈ ಭಾಗದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಕಟ್ಟುವಲ್ಲಿ ತುಂಬಾನೇ ಉಪಯುಕ್ತವಾಗಿದೆ. ತೇದಿ ರಹಿತವಾದ ಎಂದರೆ; ಅತೇದಿಯ ಶಾಸನಗಳ ಕಾಲವನ್ನು ಕೂಡ ಅಂತರಿಕ ಸಾಕ್ಷ್ಯಾಧಾರದಿಂದ ಇಲ್ಲವೇ ಲಿಪಿ ಲಕ್ಷಣಗಳಿಂದ ಸರಿಸುಮಾರಾಗಿ ನಿರ್ಣಯಿಸಲು ಸಾಧ್ಯ. ಶಾಸನಗಳು ಮೂಲಭೂತವಾಗಿ ಐತಿಹಾಸಿಕ ಆಧಾರಗಳು. ಅನುಷಂಗಿಕವಾಗಿ ಅವುಗಳು ಭಾಷೆ, ಸಾಹಿತ್ಯ, ಧರ್ಮ, ಸಮಾಜ, ಸಂಸ್ಕೃತಿ ಇತ್ಯಾದಿ ವಿಷಯಗಳ ಮೇಲೆ ಹೆಚ್ಚು ಹೆಚ್ಚು ಬೆಳಕು ಚೆಲ್ಲುತ್ತವೆ ಎಂದು ಹೇಳಬಹುದು. ಹಾಗಿದ್ದರೂ ಇಲ್ಲೊಂದು ತೊಡಕಿದೆ. ಅದು ಬಹಳಷ್ಟು ಶಾಸನಗಳು ತೀರಾ

[1].**ಸಂಶೋಧಕರು,ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು**

ಸಂಕ್ಷಿಪ್ತವಾಗಿರುತ್ತದೆ. ಒಂದು ವಸ್ತುವನ್ನು ಹೊಂದಿದ್ದರೂ ವಿವರಗಳು ಅಲ್ಲಿರುವುದಿಲ್ಲ. ಶಾಸನಗಳ ಸಂಕ್ಷಿಪ್ತತೆಯಿಂದಾಗಿ ಒಂದು ಸಮಾಜದ ಸಂಪೂರ್ಣವಾದಂತಹ ಚಿತ್ರವನ್ನು ಕಟ್ಟಿಕೊಡಲು ಸಾಧ್ಯವಾಗುವುದಿಲ್ಲ. ಆಗ ಇತರ ಆಧಾರಗಳ ನೆರವನ್ನು ಪಡೆದು ಅಂತಹ ಪ್ರಯತ್ನದಲ್ಲಿ ತೊಡಬೇಕಾಗುತ್ತದೆ.

ಮೊದಲಿಗೆ ಪಿರಿಯಾಪಟ್ಟಣದ ಪ್ರದೇಶವು ಅಂದಿನ ವಿಶಾಲವಾಗಿದ್ದಂತಹ ಹುಣಸೂರು ತಾಲ್ಲೂಕಿಗೆ ಸೇರಿತ್ತು. ಆದ್ದರಿಂದಲೇ ಈ ತಾಲ್ಲೂಕಿನಲ್ಲಿ ದೊರೆತಿರುವ ಶಾಸನಗಳ ಒಂದು ಸ್ಥೂಲವೂ ಪರಿಚಯಾತ್ಮಕವು ಆದಂತಹ ಅಧ್ಯಯನವನ್ನು ಕ್ಷೇತ್ರಕಾರ್ಯದ ಮುಖಾಂತರ ಈ ಭಾಗದ ಪ್ರಾಚೀನ ಕಾಲದ ಒಂದು ಪರಿಚಯವನ್ನು ಬಹುಸೂಕ್ಷ್ಮವಾಗಿ ಪರಿಚಯಿಸಲಾಗುತ್ತದೆ. ಪ್ರಸ್ತುತ ಅಧ್ಯಯನವು ಭೌಗೋಳಿಕ ಮತ್ತು ಆಡಳಿತದ ಅನುಕೂಲಕ್ಕಾಗಿ ಮಾಡಿಕೊಂಡಿರುವ ಒಂದು ಪ್ರದೇಶದ ಇತಿಹಾಸವನ್ನು ಅಷ್ಟಕ್ಕೆ ಸೀಮಿತಗೊಳಿಸಿ ನೋಡಲು ಸಾಧ್ಯವಿಲ್ಲ ಎಂಬುದು ನಿಜ. ಆದರೆ ಇಂದಿನ ಪಿರಿಯಾಪಟ್ಟಣ ತಾಲ್ಲೂಕಿನ ಇತಿಹಾಸವನ್ನು ಪಕ್ಕದಲ್ಲಿರುವ ಮಂಡ್ಯ, ಹಾಸನ ಮತ್ತು ಕೊಡಗು ಜಿಲ್ಲೆಗಳ ಇತಿಹಾಸದಿಂದ ಬೇರೆ ಮಾಡಿ ಅವಲೋಕಿಸುವುದಾದರೆ; ಅದು ಕಷ್ಟಕರವಾದ ವಿಚಾರ. ಪಿರಿಯಾಪಟ್ಟಣ ತಾಲ್ಲೂಕಿಗೆ ಸೇರಿರುವ ಶಾಸನಗಳ ಆಧಾರವಾಗಿಟ್ಟು ಇತಿಹಾಸವನ್ನು ಗುರುತಿಸಲಾಗಿದೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸರಿಸುಮಾರು 60 ಗ್ರಾಮಗಳಲ್ಲಿ ಒಟ್ಟು 148 ಶಿಲಾ ಶಾಸನಗಳು ಪ್ರಕಟಗೊಂಡಿರುವುದನ್ನು ಗುರುತಿಸಲಾಗಿದೆ.[2] ಆದ್ದರಿಂದಲೇ ಪಿರಿಯಾಪಟ್ಟಣ ತಾಲ್ಲೂಕಿನ ಶಾಸನಗಳ ಆಧಾರಿತವಾಗಿ ಅವಲೋಕಿಸಿದಾಗ; ಈ ಪ್ರಾಂತ್ಯವನ್ನು ಕ್ರಮವಾಗಿ ಆಳಿದಂತಹ ಕದಂಬ, ಗಂಗ, ಚಾಲುಕ್ಯ, ಚೋಳ, ಹೊಯ್ಸಳ, ವಿಜಯನಗರ, ಚಂಗಾಳ್ವ ಹಾಗೂ ಮೈಸೂರಿನ ಒಡೆಯರ್ ಅವರು ಆಳ್ವಿಕೆಯನ್ನು ಕುರಿತು ಹಲವು ಶಾಸನಗಳು ತಿಳಿಸುತ್ತವೆ. ವಿಶೇಷವಾಗಿ ಈ ಪ್ರದೇಶವನ್ನು ಆಳ್ವಿಕೆ ನಡೆಸಿರುವ ಕುರಿತು ಚಂಗಾಳ್ವರ ಶಾಸನಗಳು ಅಧಿಕವಾಗಿ ದೊರೆಯುತ್ತದೆ. ಇದೇ ಅಲ್ಲದೆ ಈ ತಾಲ್ಲೂಕಿನ ಸ್ಥಳೀಯ ಸ್ಥಳನಾಮದ ಪ್ರಕಾರ ಚಂಗಾಳ್ವ ದೊರೆಯ ಹೆಸರನ್ನು ಕೂಡ ಪ್ರಧಾನವಾಗಿ ವ್ಯಕ್ತಪಡಿಸುತ್ತದೆ.

ಕದಂಬರ ಕುರಿತು ನೋಡುವುದಾದರೆ; ಈ ನಾಡನ್ನು ಆಳ್ವಿಕೆ ನಡೆಸಿದ ಪ್ರಮುಖ ಆದಿರಾಜವಂಶಗಳಲ್ಲಿ ಒಂದಾಗಿದೆ. ಕದಂಬರ ಮನೆತನಕ್ಕೆ ಸೇರಿರುವ ಅನೇಕ ತಾಮ್ರದ ಶಾಸನವೂ ಮಹತ್ವದ ವಿಚಾರವಾಗಿದೆ.[3] ಒಂದು ಶಾಸನವು ಇದೇ ತಾಲೋಕಿನ ಹಿಟ್ನೆಹೆಬ್ಬಾಗಿಲು ಗ್ರಾಮದ ಒಬ್ಬ ನಿವಾಸಿಯ ವಶದಲ್ಲಿತ್ತು. ಈ ತಾಮ್ರದ ಶಾಸನವು ನಾಲ್ಕು ಹಲಗೆಗಳಿಂದ ಕೂಡಿದೆ. ಕದಂಬರ ರಾಜರ ಲಾಂಛನವಾದ ಸಿಂಹಮುದ್ರೆ ಸಹಿತವಾಗಿದೆ. ಇದೊಂದು ದಾನ ಶಾಸನವಾಗಿದ್ದು, ದಾನಿಯ ಹೆಸರನ್ನು ಶ್ರೀವಿಜಯ ಶಿವ ಮೃಗೇಶವರ್ಮ ಎಂದು ಹೇಳಿದೆ. ಈತ ಮೃಗೇಶವರ್ಮನೆಂದು ಸುಪರಿಚಿತನಾದ

ದೊರೆ. ಈ ಶಾಸನವನ್ನು ದೊರೆಯ ಏಳನೆಯ ಆಳ್ವಿಕೆಯ ವರ್ಷದಲ್ಲಿ ಹೊರಡಿಸಲಾಯಿತು ಎಂಬುದು ತಿಳಿದುಬರುತ್ತದೆ.

ಗಂಗರು ಆಳುತ್ತಿದ್ದ ಗಂಗ ದೊರೆಗಳಿಗೆ ಸೇರಿದ ಎರಡು ಶಾಸನಗಳು ಇಲ್ಲಿವೆ. ಮೊದಲನೆಯ ಹಿರೇಮಳಲಿ ಗ್ರಾಮದಲ್ಲಿದೆ.[4] ಈ ಶಾಸನದ ಕಾಲ ಕ್ರಿ.ಶ. 926 – 977 ಶಾಸನೋಕ್ತ ಸತ್ಯವಾಕ್ಯ ಪೆರ್ಮಾನಡಿಯನ್ನು ಎರಡನೆಯ ರಾಚಮಲ್ಲನೆಂದು ತಿಳಿದುಬರುತ್ತದೆ. ಕುವಲಾಳ ಪರಮೇಶ್ವರ ನಂದಿಗಿರಿನಾಥ ಮುಂತಾದ ಬಿರುದುಗಳುಳ್ಳ ಈ ದೊರೆಯು ಗಂಗವಾಡಿ 32000 ಪ್ರದೇಶವನ್ನು ಆಳುತ್ತಿದ್ದ ಕುಪ್ಪನಾಡಿಗೆ ಸೇರಿದ ಮಣಲೂರು ಗ್ರಾಮವನ್ನು ಮಯ್ದನಗೊಮ್ಮಯ್ಯನು ಒಂದು ಅಗ್ರಹಾರವಾಗಿ ಒಬ್ಬ ವ್ಯಕ್ತಿಗೆದಾನ ನೀಡಿರುವುದನ್ನು ತಿಳಿಸುತ್ತದೆ. ಆದರೆ ಇನ್ನೊಂದು ಪ್ರಮುಖವಾದ ವಿಚಾರವೇನೆಂದರೆ; ದಾನವನ್ನು ಪಡೆದ ವ್ಯಕ್ತಿಯ ಹೆಸರು ಮಾತ್ರ ತಿಳಿದು ಬರುವುದಿಲ್ಲ ಮತ್ತೊಂದು ಶಾಸನವು ಕೊರಗಲ್ಲಿನಲ್ಲಿದೆ.[5]ಗಂಗ ಪೆರ್ಮಾನಡಿಯು ರಾಜ್ಯವಾಳುತ್ತಿದ್ದಾಗ ಎರೆಯಪ್ಪನೆಂಬಿನ ಕೊಂಗಲ್ನಾಡು ಪ್ರಾಂತ್ಯವನ್ನು ಆಳುತ್ತಿದ್ದಾಗ ಹಾಗೂ ಕೂರಗಲ್ಲನ್ನು ಬೂತುಗನ ಅರಸಿ ಪರಮಬ್ಬೆಯು ಪಾಲಿಸುತ್ತಿದ್ದಳು. ಆ ಕಾಲದಲ್ಲಿ ಸಂಭವಿಸಿದ ತುರುಗಾಳಗವೊಂದರಲ್ಲಿ ಕೂರಗಲ್ಲಿನ ಇಬ್ಬರು ಗಾವುಂಡರು ಹೋರಾಡಿ ಮೃತರಾದರು. ಮೃತವೀರರ ಈ ಸಾಹಸಕ್ಕಾಗಿ ಕಲ್ನಾಡಾಗಿ ನೀಡಿದನು. ಕಾದಾಡಿ ಮಡಿದ ವೀರನ ಸ್ಮರಣಾರ್ಥ ಕಲ್ಲುನೆಟ್ಟು ಅವನ ಬಂದು ವರ್ಗಕ್ಕೆ ಬಳುವಳಿಯಾಗಿ ಕೊಡುವ ದತ್ತಿ ಇದು ಎಂದು ತಿಳಿದುಬರುತ್ತದೆ.[6]

ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದಂತೆ ಒಂದೇ ಒಂದು ಶಾಸನ ಈ ತಾಲ್ಲೂಕಿನ ಕುಡಕೂರಿನಲ್ಲಿ ದೊರೆತಿದೆ.[7] ಈ ಶಾಸನವು ಒಂದು ವೀರಗಲ್ಲು ಶಾಸನವಾಗಿದ್ದು, ಇದರ ಕಾಲ ಕ್ರಿ.ಶ. 997–98 ಚಾಲುಕ್ಯಪೆರ್ಮಾನಡಿ ದೇವನ ಮಗಳಾದ ಪಂಪಾದೇವಿಯ ರಾಜ್ಯಾಭ್ಯುದಯದ ವಿಚಾರ ತಿಳಿದುಬರುತ್ತದೆ. ಹೊಯ್ಸಳರ ಕಾಲಕ್ಕೆ ಎರಡು ಶಾಸನಗಳಿವೆ. ಅವುಗಳಲ್ಲಿ ಒಂದು ಕಂಪಲಾಪುರದ ಕರಕಂಠೇಶ್ವರ ದೇವಾಲಯದ ಪ್ರಕಾರದಲ್ಲಿರುವ ವೀರಗುಡಿಯೊಳಗಿದೆ.[8] ಈ ಶಾಸನದ ಕಾಲ ಕ್ರಿ.ಶ.1174, ಆ ಸಂದರ್ಭದಲ್ಲಿ ಎರಡನೆಯ ಬಲ್ಲಾಳನು ದ್ವಾರಸಮುದ್ರದಿಂದ ಆಳುತ್ತಿದ್ದ. ಅರಸನ ಅನೇಕ ಬಿರುದುಗಳನ್ನು ಈ ಶಾಸನವು ತಿಳಿಸುತ್ತದೆ. ಎರಡನೆಯ ಬಲ್ಲಾಳನ ಶಾಸನದ ಅನಂತರ ಸರಿಸುಮಾರು 150 ವರ್ಷಗಳ ಅನಂತರ ಮೂರನೆಯ ಬಲ್ಲಾಳನ ಶಾಸನವೊಂದು[9] ಹಳಗನಹಳ್ಳಿಯಲ್ಲಿ ಕಂಡುಬರುತ್ತದೆ. ಇದರ ಕಾಲ ಕ್ರಿ.ಶ. 1338ರ ಆಗಸ್ಟ್ 25ರಲ್ಲಿ ಹೊಯ್ಸಳರ ಆಳ್ವಿಕೆಯ ಅಂತ್ಯವಾಗಲೇ ಆರಂಭಗೊಂಡಿತ್ತು. ವಿಜಯನಗರ ಸಾಮ್ರಾಜ್ಯದ ಸಂಸ್ಥಾಪನೆಯಾಗಿತ್ತು. ಮಹಾಪ್ರಧಾನ ಸಿಂಗೆಯ ದಣ್ಣಾಯಕನು ಹಳಗನಹಳ್ಳಿಯನ್ನು ಹಾಗೂ

ಇತರ ಸ್ವಲ್ಪ ಹೊಲಗದ್ದೆಗಳನ್ನು ದಾನವಿತ್ತ ವಿಷಯವನ್ನು ಈ ಶಾಸನವು ನಿರೂಪಿಸುತ್ತದೆ. ಆದರೆ ದಾನ ಪಡೆದವನ ಹೆಸರು ಸ್ಪಷ್ಟವಾಗಿ ತಿಳಿದುಬರುವುದಿಲ್ಲ.

ಮಲ್ಲಿನಾಥಪುರ ಶಾಸನವು ವಿಜಯನಗರದ ಎರಡನೆಯ ಹರಿಹರನ ಆಳ್ವಿಕೆಗೆ ಸೇರಿದೆ. ಇದರ ಕಾಲ ಕ್ರಿ.ಶ. 1398ರ ಫೆಬ್ರವರಿ 18ರಂದು ಅರಸರ ಆದೇಶದ ಮೇರೆಗೆ ಲಖಚಿಣವೊಡೆಯನು ಕುಡಕೂರ ಮಲ್ಲಿಕಾರ್ಜುನ ದೇವರ ಸೇವೆಗಳಿಗಾಗಿ ಸಿಂಗಪಟ್ಟಣದ ಉಪಗ್ರಾಮವಾದ ಅಪಗೊಂಡನ ಹಳ್ಳಿಯನ್ನು ದಾನವಾಗಿತ್ತನು. ಆ ಗ್ರಾಮದ ಆದಾಯ 25 ಗದ್ಯಾಣಗಳೆಂದು ತಿಳಿದುಬರುತ್ತದೆ. ಶಾಸನದಲ್ಲಿ ಕಾವೇರಿ ನದಿಯ ಉಲ್ಲೇಖವಿದೆ. ಶಾಸನದಲ್ಲಿ ಹೇಳಿರುವ ಸಿಂಗಪಟ್ಟಣವು ಈಗಿನ ಪಿರಿಯಾಪಟ್ಟಣ.[10] ಚಂಗಾಳ್ವರ ಇತಿಹಾಸ ಸುಮಾರು ಹತ್ತನೆಯ ಶತಮಾನದಿಂದ ಹದಿನೇಳನೆಯ ಶತಮಾನದ ಮದ್ಯಭಾಗದವರೆಗೆ ವ್ಯಾಪಿಸಿದೆ ಈ ತಾಲ್ಲೂಕಿನಲ್ಲಿ ಸುಮಾರು ಶೇಕಡಾ 25ರಷ್ಟು ಶಾಸನಗಳು ಚಂಗಾಳ್ವರದ್ದೇ ಆಗಿದೆ.

ಮೈಸೂರು ಒಡೆಯರಿಗೆ ಸಂಬಂಧಿಸಿದ ನಾಲ್ಕು ಶಾಸನಗಳು ಪಿರಿಯಾಪಟ್ಟಣ ತಾಲ್ಲೂಕಿನಲ್ಲಿವೆ. ಈ ತಾಲ್ಲೂಕಿನ ಕಗ್ಗುಂಡಿ ಶಾಸನದ ಪ್ರಕಾರ ನೋಡುವುದಾದರೆ; ಕ್ರಿ.ಶ.1672ನೇ ನವೆಂಬರ್ 14ರ ಗುರುವಾರದಂದು ದೇವರಾಜ ಒಡೆಯ ಕಗ್ಗುಂಡಿ ಹಳ್ಳಿಗೆ ದೇವರಾಜಪುರವೆಂದು ಹೆಸರಿಟ್ಟು ಸತ್ಯದ ಧರ್ಮಕ್ಕೆ ನೀಡಿದ್ದದ್ದು, ಶಾಸನ ಪಾಠದಿಂದ ತಿಳಿದುಬರುತ್ತದೆ.[11] ಕ್ರಿ.ಶ.1833ನೇ ಮೇ 6ರ ಭಾನುವಾರದಂದು ಕೃಷ್ಣರಾಜ ಒಡೆಯ ರಾಜ್ಯವಾಳುತ್ತಿದ್ದಾಗ ನರಸಿಂಹ ಮಾಡಿದ ಒಂದು ದಾನವನ್ನು ನೀಡಿರುವ ಕುರಿತು ತಿಳಿದುಬರುತ್ತದೆ. ಈ ಶಾಸನವು ಕಣಗಾಲದಲ್ಲಿದೆ.[12] ಆದರೆ ಸಾಕಷ್ಟು ವಿಚಾರವನ್ನು ತಿಳಿಸಿಲ್ಲ. ಇನ್ನೊಂದು ವಿಚಾರವೇನೆಂದರೆ, ಭಾನುವಾರವನ್ನು ಸೂರ್ಯವಾರವೆಂದು ಕರೆಯಲಾಗಿದೆ. ಕ್ರಿ.ಶ. 1867ರಲ್ಲಿ ಕೃಷ್ಣರಾಜ ಒಡೆಯರ ಪಾದ ಸೇವಕನಾದ ಹಜೂರು ಮೋದೀಖಾನೆ ಸಾವಕಾರ ಎಂಬುವನು ಬೆಟ್ಟದಪುರದ ಮೇಗಳಮನೆ ಲಿಂಗಣ್ಣನ ಮಗನಾದ ನಾಗಶೆಟ್ಟಿಯು ಹಿತ್ತಾಳೆಯ ವೃಷಭ ವಾಹನವನ್ನು ಮಲ್ಲಿಕಾರ್ಜುನ ದೇವರಿಗೆ ಮಾಡಿಸಿಕೊಟ್ಟಿರುವುದರ ಕುರಿತು ತಿಳಿದುಬರುತ್ತದೆ.[13] ಅಲ್ಲದೆಇದೇ ವ್ಯಕ್ತಿಯು ಮೂರನೆಯ ವರ್ಷ ಮಯೂರ ವಾಹನವನ್ನು ಮಾಡಿಸಿಕೊಟ್ಟ ವಿಚಾರ ತಿಳಿದುಬರುತ್ತದೆ.[14] ಬೆಟ್ಟದಪುರದಲ್ಲಿರುವ ತಾಂಡವೇಶ್ವರ ಮತ್ತು ಚಂಡಿಕಾಂಬಿಕೆ ಮೂರ್ತಿಗಳ ಪೀಠಗಳ ಮೇಲಿನ ಶಾಸನ ಪಾಠದಿಂದ ಅವುಗಳನ್ನು ಕಳಲೆ ನೀರರಾಜವೊಡೆಯನ ಮಗನಾದ ನಂಜರಾಜವೊಡೆಯನು ಮಾಡಿಸಿಕೊಟ್ಟನೆಂದು ತಿಳಿದುಬರುತ್ತದೆ. ಭಾರಧ್ವಾಜಗೋತ್ರ ಅಶ್ವಲಾಯನ ಸುತ್ರ ಹಾಗೂ ಋಕ್ ಶಾಲೆಗೆ ಸೇರಿದವನು ಮತ್ತು ಮಹಿಶೂರ ದಳವಾಯಿ ದೊಡ್ಡೈಯನ ಮೊಮ್ಮಗ ಎಂದು ತಿಳಿದುಬರುತ್ತದೆ. ಈ ಶಾಸನದ ಕಾಲ ಕ್ರಿ.ಶ. 18ನೆಯ ಶತಮಾನ ಎಂದು ತಿಳಿಯಬಹುದಾಗಿದೆ.[15]

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸಾಕಷ್ಟು ಶಾಸನಗಳು ವೀರಗಲ್ಲು ಶಾಸನಗಳೇ ಆಗಿವೆ ಹಾಗೂ ದಾನ ಶಾಸನಗಳಲ್ಲಿ ಭೂಮಿದಾನ, ಗ್ರಾಮಗಳ ದಾನ, ಧನದಾನ, ತೆರಿಗೆಗಳ ದಾನ, ದೇವಸ್ಥಾನದ ದಾನ,

ಮಗದ ದಾನ, ದೇವರಿಗೆ ದಾನ, ಹಿತ್ತಾಳೆಕೊಡ, ಆನೆದಾನ ಕುರಿತು ತಿಳಿದುಬರುತ್ತದೆ. ಧಾರ್ಮಿಕ ಹಾಗೂ ಸಾಮಾಜಿಕ ಪುಣ್ಯವನ್ನು ತಿಳಿಸುವಂತಹ ಶಾಸನಗಳು ಸಹ ಇವೆ. ಈ ಮೇಲಿನ ಶಾಸನಗಳ ಹಿನ್ನೆಲೆಯಲ್ಲಿ ಈ ಪ್ರದೇಶದ ಇತಿಹಾಸವನ್ನು ತಿಳಿಯಬಹುದಾಗಿದೆ. ಈ ಭಾಗದಲ್ಲಿ ಕ್ರಿ.ಶ. 8ನೇ ಶತಮಾನಕ್ಕೆ ತಲಕಾಡಿನ ಗಂಗರ ಇತಿಹಾಸ ಪ್ರಾರಂಭವಾಗಿದೆ. ಕ್ರಿ.ಶ. 9ನೇಯ ಶತಮಾನದ ಪ್ರಾರಂಭದಿಂದ ದಿಢೀರನೆ ಚಂಗಾಳ್ವ ಎಂಬ ರಾಜವಂಶಇಲ್ಲಿ ಪ್ರಕಟವಾಗಿದೆ. 10ನೆಯ ಶತಮಾನದ ಕೊನೆಯಲ್ಲಿ ಚೋಳರ ದಾಳಿಗೆ ಸಿಲುಕಿದ ಗಂಗವಂಶ ತನ್ನ ಅಸ್ತಿತ್ವ ಕಳೆದುಕೊಂಡಿತು. ಗಂಗವಾಡಿ ಸಂಪೂರ್ಣವಾಗಿ ಚೋಳರ ವಶವಾಯಿತು. ಆ ಸಂದರ್ಭದಲ್ಲಿ ಈ ಭಾಗದಲ್ಲಿ ಚಂಗಾಳ್ವರು ಕ್ರಿ.ಶ. 10–11ನೇ ಶತಮಾನದ ಪ್ರಾರಂಭದಿಂದ ದಿಢೀರನೆ ಚಂಗಾಳ್ವ ಎಂಬ ರಾಜವಂಶಇಲ್ಲಿ ಬಂದಿದೆ. ಕ್ರಿ.ಶ.10ನೇ ಶತಮಾನದ ಕೊನೆಯಲ್ಲಿ ಚೋಳರ ದಾಳಿಗೆ ಸಿಲುಕಿದ ಗಂಗವಂಶ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಗಂಗವಾಡಿ ಸಂಪೂರ್ಣವಾಗಿ ಚೋಳರ ವಶವಾಯಿತು. ಆಗ ವಿಸ್ತಾರವಾದ ಗಂಗವಾಡಿಯ ವ್ಯವಸ್ಥಿತ ಆಡಳಿತಕ್ಕಾಗಿ ಚೋಳರು ಹಲವಾರು ರಾಜಕೀಯ ಬದಲಾವಣೆಗಳನ್ನು ಮಾಡಿರಬಹುದು. ಅದರ ಒಂದು ಗುರುತು ಚಂಗಾಳ್ವರು. ಇವರು ಪ್ರಪ್ರಥಮವಾಗಿ ನಮಗೆ ಕಾಣಿಸಿಕೊಳ್ಳುವುದೇ ಚೋಳರ ಸಾಮಂತರಾಗಿ. ಇವರ ಚೋಳನಿಷ್ಠೆ ಅಚಲವಾದುದು. ಇವರ ಹೆಸರಿನಲ್ಲಿ ಚಂಗಾಳ್ವ ಎನ್ನುವುದನ್ನು ಬಿಟ್ಟರೆ ಉಳಿದೆಲ್ಲವೂ ಚೋಳ ಹೆಸರೇ. ಚೋಳರು ತಮಿಳರು. ಕರ್ನಾಟಕದಲ್ಲಿನ ಅವರ ಬಹುತೇಕ ಶಾಸನಗಳು ತಮಿಳು ಭಾಷೆಯಲ್ಲೇ ಇವೆ. ಇದುವರೆಗೆ ದೊರೆತಿರುವ ಚಂಗಾಳ್ವರ ಎಲ್ಲಾ ಶಾಸನಗಳು ಅಚ್ಚಕನ್ನಡ ಭಾಷೆ ಮತ್ತು ಲಿಪಿಯಲ್ಲೇ ಇವೆ.

ಚೋಳರ ಸಾಮಂತರಾಗಿದ್ದ ಚಂಗಾಳ್ವರು 12ನೆಯ ಶತಮಾನದ ಪೂರ್ವಾರ್ಧದಲ್ಲಿ ಹೊಯ್ಸಳರ ಸಾಮಂತರಾದರು. ಹೊಯ್ಸಳ ರಾಜ ವಿಷ್ಣುವರ್ಧನನು ಚಂಗಾಳ್ವರನ್ನು ಸೋಲಿಸಿ ತನ್ನ ವಶಮಾಡಿಕೊಂಡಿದ್ದನು. ಈ ಕಾರ್ಯ ಪ್ರಾಯಶಃ ತಲಕಾಡನ್ನು ಸಂಪುರ್ಣ ಒಪ್ಪಿಕೊಂಡಂತೆ ತಿಳಿದುಬರುವುದಿಲ್ಲ. ಕ್ರಿ.ಶ. 1124ರಲ್ಲಿ ಇಬ್ಬರ ಮಧ್ಯೆಯುದ್ಧ ನಡೆದಿರುವಂತೆ ಕಂಡುಬರುತ್ತದೆ. ಮುಂದೆ ಎರಡನೆಯ ವೀರಬಲ್ಲಾಳನ ಕಾಲಕ್ಕೆ ಮತ್ತೊಮ್ಮೆ ಇಬ್ಬರೂ ಕಾದಾಡಿ ಸೋಲನ್ನು ಹಂಚಿಕೊಂಡಿರುವ ವಿಚಾರ ಶಾಸನಗಳಿಂದ ತಿಳಿದುಬರುತ್ತದೆ. ಈ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಚಂಗಾಳ್ವ, ವಿಜಯನಗರ ಅರಸರ ಸಂಬಂಧ ಮತ್ತು ಚಂಗಾಳ್ವ ಮೈಸೂರು ಒಡೆಯರ ಸಂಬಂಧಗಳು ಇಲ್ಲಿವೆ. ಪಿರಿಯಾಪಟ್ಟಣದ ಚಂಗಾಳ್ವರಿಗೂ, ಮೈಸೂರು ಒಡೆಯರಿಗೂ ಕ್ರಿ.ಶ. 1517–1617ರ ಕಾಲದಿಂದಲೂ ಯುದ್ಧಗಳು ನಡೆಯುತ್ತಲೇ ಇದ್ದವು. ರಾಜ ಒಡೆಯ ಪಿರಿಯಾಪಟ್ಟಣಕ್ಕೆ ಸೇರಿದ್ದ ಸೆರೂರು ಮತ್ತು ಮಾವತ್ತೂರುಗಳನ್ನು ವಶಪಡಿಸಿಕೊಂಡ, ಕಂಠೀರವ ನರಸರಾಜ ಮೊದಲ ಮುತ್ತಿಗೆಯಲ್ಲಿ ಚಂಗಾಳ್ವರಿಗೆ ಅರಕಲಗೂಡು ಮತ್ತು ಬೆಟ್ಟದಪುರಗಳನ್ನು ವಶಪಡಿಸಿಕೊಂಡ. ನರಸರಾಜನ ದಳವಾಯಿ ಕ್ರಿ.ಶ 1644ರಲ್ಲಿ ಪಿರಿಯಾಪಟ್ಟಣವನ್ನು ಮುತ್ತಿ ಹನ್ನೆರಡು ತಿಂಗಳುಗಳ ಕಾಲ ಸತತವಾಗಿ ಹೋರಾಡಿ ಪಿರಿಯಾಪಟ್ಟಣವನ್ನು ಮೈಸೂರಿನ

ಅಧೀನಕ್ಕೆ ತೆಗೆದುಕೊಂಡ ದಳವಾಯಿ ಮುತ್ತಿಗೆ ಹಾಕಿದಾಗ ಪಿರಿಯಾಪಟ್ಟಣವನ್ನು ಆಳುತ್ತಿದ್ದವನು ಚಂಗಾಳ್ವ ಅರಸನಾದ ವೀರರಾಜ.

ಮೈಸೂರು ಸೈನ್ಯ ಪಿರಿಯಾಪಟ್ಟಣವನ್ನು ಕ್ರಿ.ಶ 1644ರಲ್ಲಿ ಮುತ್ತಲು ಕಾರಣವೆಂದರೆ; ಪಿರಿಯಾಪಟ್ಟಣದ ರಾಜನು ಮೈಸೂರು ಅರಸನಿಗೆ ವಾರ್ಷಿಕ ಪೊಗದಿಯಾಗಿ ಮೂರು ಸಾವಿರ ವರಹಗಳನ್ನು ಕೊಡಬೇಕೆಂದು ತೀರ್ಮಾನವಾಗಿತ್ತು. ಈ ಒಪ್ಪಂದವನ್ನು ಮುರಿದ ಪಿರಿಯಾಪಟ್ಟಣದ ರಾಜನಿಗೆ ಮೈಸೂರು ಅರಸರಿಗೂ ಯುದ್ಧ ನಡೆಯಿತೆಂದು ಇತಿಹಾಸ ಹೇಳುತ್ತದೆ.[16]

ಪಿರಿಯಾಪಟ್ಟಣ, ಹೈದರಾಲಿ, ಟಿಪ್ಪು ಸುಲ್ತಾನ್ ಕಾಲದಲ್ಲಿ ಮೈಸೂರು ಮತ್ತು ಕೊಡಗಿನ ಅರಸರ ಹೋರಾಟದ ಕಣವಾಯಿತು. ಕೊಡಗಿನ ವೀರರಾಜೇಂದ್ರನನ್ನು ಪಿರಿಯಾಪಟ್ಟಣದ ಕೋಟೆಯಲ್ಲಿ ನಾಲ್ಕು ವರ್ಷಗಳ ಕಾಲ ಬಂಧಿಯಾಗಿರಿಸಲಾಗಿತ್ತು. ಆನಂತರ ಪಿರಿಯಾಪಟ್ಟಣ ಉಳಿದಿದ್ದರೂ ಅವಸಾನ ಗತಿಯಲ್ಲಿತ್ತು.[17] ಕೊಡಗು, ಕೃಷ್ಣರಾಜನಗರ, ಹುಣಸೂರು, ಹೆಗ್ಗಡದೇವನಕೋಟೆ ತಾಲ್ಲೂಕುಗಳ ಮಧ್ಯೆ ಈ ಪಿರಿಯಾಪಟ್ಟಣವಿದೆ. ಈ ಪಿರಿಯಾಪಟ್ಟಣದಲ್ಲಿ ಆಳ್ವಿಕೆ ನಡೆಸಿರುವ ಮೈಸೂರಿನ ಒಡೆಯರ ಕೊಡುಗೆಗಳು ಪ್ರಸ್ತುತ ಲೇಖನದ ವಿಷಯವಾಗಿದ್ದು, ಅದನ್ನು ಸ್ವವಿವರವಾಗಿ ಅಧ್ಯಯನವನ್ನು ನಡೆಸಬೇಕಾಗಿದೆ.

**ಅಡಿಟಿಪ್ಪಣಿಗಳು**

1 ಎಚ್.ಎಂ.ನಾಗರಾಜರಾವ್, ಶಿವಶೋಧ, ರಚನಾ ಪ್ರಕಾಶನ, ಮೈಸೂರು, 2008, ಪುಟ.175.

2 ಎಫಿಗ್ರಾಫಿಯಾ ಕರ್ನಾಟಿಕ, ಸಂಪುಟ–4,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮೈಸೂರು ವಿಶ್ವವಿದ್ಯಾನಿಲಯ,ಮಾನಸಗಂಗೋತ್ರಿ,ಮೈಸೂರು, 1975,ಪಿರಿಯಾಪಟ್ಟಣ ತಾಲ್ಲೂಕಿನ ಶಾಸನಸಂಖ್ಯೆ–28

3 ಅದೇ, ಶಾಸನ ಸಂಖ್ಯೆ –49.

4 ಅದೇ, ಶಾಸನ ಸಂಖ್ಯೆ –133.

5 ಅದೇ, ಶಾಸನ ಸಂಖ್ಯೆ –28.

6 ಅದೇ, ಸಂಪುಟ–2, 1976, ಪುಟ. 1603

7 ಎಫಿಗ್ರಾಫಿಯಾ ಕರ್ನಾಟಿಕ, ಸಂಪುಟ – 4, ಪಿರಿಯಾಪಟ್ಟಣ ತಾಲ್ಲೂಕು ಶಾಸನ ಸಂಖ್ಯೆ – 92.

8 ಅದೇ, ಶಾಸನ ಸಂಖ್ಯೆ – 119.

9 ಅದೇ, ಶಾಸನ ಸಂಖ್ಯೆ – 19.

10 ಅದೇ, ಶಾಸನ ಸಂಖ್ಯೆ – 88.

11 ಅದೇ, ಶಾಸನ ಸಂಖ್ಯೆ – 112.

[12] ಅದೇ, ಶಾಸನ ಸಂಖ್ಯೆ – 17.

[13] ಅದೇ, ಶಾಸನ ಸಂಖ್ಯೆ – 63.

[14] ಅದೇ, ಶಾಸನ ಸಂಖ್ಯೆ – 64.

[15] ಅದೇ, ಶಾಸನ ಸಂಖ್ಯೆ – 79.

[16] ಡಾ.ಪಿ.ಕೆ.ರಾಜಶೇಖರ್, ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು, 2010, ಪುಟ.20 – 21.

[17] ಅದೇ, ಪುಟ.21.